



ಸ್ವಾಮಿ ವಿವೇಕಾನಂದರು ೧೮೯೨ರ ಅಕ್ಟೋಬರ್ ತಿಂಗಳಲ್ಲಿ ಬೆಳಗಾವಿಗೆ ಬಂದಾಗ ಮೊದಲು ಶ್ರೀ ಭಾಟೆ ಅವರ ಮನೆಯಲ್ಲಿ ಮೂರು ದಿನಗಳ ಕಾಲ ತಂಗಿದ್ದರು. ಆ ಪವಿತ್ರಸ್ಥಾನವು ಇತ್ತೀಚೆಗೆ ಬೆಳಗಾವಿಯ ರಾಮಕೃಷ್ಣ ಮಿಷನ್ ಆಶ್ರಮದ ವಶಕ್ಕೆ ಬಂದಿದೆ. ಎಡದ ಚಿತ್ರದಲ್ಲಿ ಆ ಕಟ್ಟಡದ ದ್ವಾರವನ್ನು ನೋಡಬಹುದು. ಈ ಕಟ್ಟಡದಲ್ಲಿ ಸಂರಕ್ಷಿಸಲಾಗಿರುವ ಸ್ವಾಮಿ ವಿವೇಕಾನಂದರು ಉಪಯೋಗಿಸಿದ ಮಂಚ, ಮರದ ಊರುಗೋಲು, ಪಾದುಕೆ ಇತ್ಯಾದಿಗಳನ್ನು ಬಲಗಡೆಯ ಚಿತ್ರದಲ್ಲಿ ಕಾಣಬಹುದು.

## ಹಾವೇರಿ ಜಿಲ್ಲೆಯಲ್ಲಿ ಯಶಸ್ವಿ ಜ್ಞಾನವಾಹಿನಿ

ದಿನಾಂಕ ೨೧.೧.೨೦೦೭ರಿಂದ ೦೩.೨.೨೦೦೭ರವರೆಗೆ ಹಾವೇರಿ ಜಿಲ್ಲೆಯಲ್ಲಿ ಜ್ಞಾನವಾಹಿನಿ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆದವು. ೧೧ ಶಾಲಾ ಕಾಲೇಜುಗಳಲ್ಲಿ ನಡೆದ ವ್ಯಕ್ತಿತ್ವ ವಿಕಸನ ಕಾರ್ಯಕ್ರಮಗಳಲ್ಲಿ ೪೧೦೦ ವಿದ್ಯಾರ್ಥಿಗಳು ಭಾಗವಹಿಸಿ ಪ್ರಯೋಜನವನ್ನು ಪಡೆದುಕೊಂಡಿದ್ದಾರೆ. ಸಂಜೆಯ ವೇಳೆ ನಡೆದ ಸತ್ಸಂಗ ಮತ್ತು ಚಲನಚಿತ್ರ ಪ್ರದರ್ಶನಗಳಲ್ಲಿ ೨೫೦೦ಕ್ಕೂ ಹೆಚ್ಚು ಸಾರ್ವಜನಿಕರು ಭಾಗವಹಿಸಿದ್ದರು.

ದಿನಾಂಕ ೦೧.೦೩.೨೦೦೭ರಂದು ರಾಣೆಬೆನ್ನೂರಿನ ಮೃತ್ಯುಂಜಯ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಿದ್ದ 'ಸಾರ್ವಜನಿಕ ಸತ್ಸಂಗ' ಕಾರ್ಯಕ್ರಮದಲ್ಲಿ ಮೈಸೂರಿನ ಶ್ರೀರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ನಿತ್ಯಸ್ಥಾನಂದಜಿ ಮಹಾರಾಜ್ ವಿಶೇಷ ಉಪನ್ಯಾಸಕರಾಗಿ ಆಗಮಿಸಿ 'ಸ್ವಾಮಿ ವಿವೇಕಾನಂದರ ಸೇವಾತತ್ವ' ವನ್ನು ಕುರಿತು ಮಾತನಾಡಿದರು. "ಸೇವೆಯ ಹಿಂದೆ ತ್ಯಾಗ ಮನೋಭಾವನೆ ಇರಬೇಕು. ಸಾಮಾಜಿಕ-ನಾಗರಿಕತೆಯ ತಳಹದಿಯೇ ತ್ಯಾಗ. ಅಹಂಕಾರದ ತ್ಯಾಗವೇ ಬಹಳ ಮುಖ್ಯವಾದುದು. ತ್ಯಾಗ ಮತ್ತು ಸೇವೆಯಲ್ಲಿ ದೇಶವನ್ನು ತೊಡಗಿಸಿದರೆ ಎಲ್ಲ ಕಾರ್ಯಗಳು ಸರಳವಾಗಿ ನಡೆಯುತ್ತವೆ. ಕುಟುಂಬ, ಸಂಸ್ಥೆ, ದೇಶ... ಪ್ರತಿಯೊಂದೂ ಮುಂದುವರಿಯಲು ತ್ಯಾಗವೇ ಮುಖ್ಯ... ಪ್ರತಿಯೊಬ್ಬರೂ ಪೂರ್ಣದೃಷ್ಟಿ ಹೊಂದಿ ಸಾಮಾಜಿಕ ಪ್ರಜ್ಞೆಯಿಂದ ಅಹಂಕಾರ ತ್ಯಜಿಸಿ, ತ್ಯಾಗ ಮನೋಭಾವನೆಯಿಂದ ದೇಶಕ್ಕೆ, ಸಮಾಜಕ್ಕೆ ಉಪಯುಕ್ತ ಸೇವೆ ಸಲಿಸಲು



ಸ್ವಾಮಿ ವಿವೇಕಾನಂದರ ವಾಣಿಗಳು ಇಂದಿನ ಜನತೆಗೆ ತೀರಾ ಅತ್ಯಗತ್ಯವಾಗಿವೆ" ಎಂದು ಅವರು ನುಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸ್ಥಳೀಯ ಎಸ್.ಟಿ.ಜೆ.ಐ.ಟಿ ಇಂಜನೀರಿಂಗ್ ಕಾಲೇಜಿನ ಪ್ರಿನ್ಸಿಪಾಲ್ ಎಸ್.ಕೆ. ರಾಯ್ಕರ್ ಅವರು ಜನರನ್ನು ಅದರಲ್ಲೂ ಯುವಕರನ್ನು, ಮಕ್ಕಳನ್ನು ಪ್ರಗತಿಯತ್ತ ಕರೆದೊಯ್ಯಲು ಸ್ವಾಮಿ ವಿವೇಕಾನಂದರ ನುಡಿಗಳಿಂದ ಎಚ್ಚರಗೊಳಿಸುವ ಅಗತ್ಯವಿದೆಯೆಂದು ಮಾತನಾಡುತ್ತ, 'ಸತ್ಯ, ಸಂಪತ್ತು, ಯಶಸ್ಸು' ಈ ಮಾತುಗಳ ಮಿಲನದ ಕುರಿತು ದೃಷ್ಟಾಂತದೊಂದಿಗೆ ವಿವರಿಸಿದರು.

ವರದಿ: ಬಿ.ಪಿ. ಶಿಡೇನೂರ, ರಾಣೆಬೆನ್ನೂರು